1	2	3
127	Madenahalli	24
128	Ramalingapura	23
129	Janakal	13
130	Maridasarahalli	4
131	Pura	19
132	Neralegudda	17
133	Shakadadu	4
134	Yeradakatte	25
135	Chinnappanahatti	17
136	Kurubarahalli	8
137	Jogaiahnapalya	2
138	Hunasekatte	27
139	Mandalahalli	4
140	Huildore	16
141	Kambahalli	3

ಕೆಲಸ ನಿಲ್ಲುಸಂವುದನ್ನು ತಡೆಗಟ್ಟಲು ದಾವಣಗೆರೆ ವಿದ್ಯುಚ್ಛಕ್ತಿಯನ್ನು ನಿಯಮಿತವಾಗಿ ಸರಬರಾಜು ಮಾಡುವುದು

೭೪ ಶ್ರೀ ಪಂಪಾವತಿ (ದಾವಣಗೆರೆ).— *ಮಾನ್ಯ ವಿದ್ಯುಚ್ಛಕ್ತಿ ಹಾಗೂ ಅಬ್ಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ದಾವಣಗೆರೆಯಲ್ಲಿರುವ ಅನೇಕ ಕೈಗಾರಿಕೆಗಳು ವಿದ್ಯುಚ್ಛಕ್ತಿ ಅಭಾವದಿಂದ 'ಲೇ ಆಫ್' ಆಗುತ್ತಿದ್ದು ಉತ್ಪಾದನೆಗೆ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

(ಆ) ವಿದುಚ್ಛಕ್ತಿ ಅಭಾವದಿಂದ ಕಾರ್ಮಿಕರಿಗೆ ಕೆಲಸವಿಲ್ಲದೆ ಅವರ ವರಮಾನ ಕಡಿಮೆಯಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

(ಇ) ಸಾಕಷ್ಟು ವಿಡುಚ್ಛಕ್ತಿಯನ್ನು ದಾವಣಗೆರೆಗೆ ಸರಬರಾಜು ಮಾಡಲು ಸರ್ಕಾರದವರು ಯಾವ ಕ್ರಮ ಕೈಗೊಂಡಿರುವರು ?

ಶ್ರೀ ಜೆ. ಹೆಚ್. ಪಟೇಲ್ (ಅಬ್ಕಾರಿ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು).—

(ಅ) ವಿದ್ಯುಚ್ಛಕ್ತಿ ಅಭಾವದಿಂದ 'ಲೇ ಆಫ್' ಆಗುತ್ತಿದ್ದ ವಿಚಾರ ಸರ್ಕಾರದ ಗಮನಕ್ಕೆ ಬಂದಿಲ್ಲ, ಆದರೆ ವಿದ್ಯುತ್ ಕಡತದಿಂದ ಮತ್ತು ಲೋಡ್ ಪೆಡಿಂಗ್‌ನಿಂದ ಉತ್ಪಾದನೆಗೆ ತೊಂದರೆಯಾಗಿದೆ.

(ಆ) ಬಂದಿಲ್ಲ.

*ಸದಸ್ಯರು ಹಾಜರಿರಲಿಲ್ಲ,

(ಇ) ದಾವಣಗೆರೆಯಲ್ಲಿ ೨೨೦ ಕೆ.ವಿ ಟಿಟಿ ಕೆ.ವಿ.ಯ ಒಂದು ಸ್ಟೇಷನ್ ಇದೆ. ಇಲ್ಲಿಯ ೬೦ ಎಂ.ವಿ.ಎ. ಟ್ರಾನ್ಸ್‌ಫಾರಮರ್ ಜೊತೆಗೆ ಮತ್ತೊಂದು ೬೦ ಎಂ.ವಿ.ಎ. ಟ್ರಾನ್ಸ್‌ಫಾರಮರ್ ಹಾಕುವ ಕಾರ್ಯವನ್ನು ಮಂಡಳಿಯು ಕೈಗೊಳ್ಳುವುದು. ಮುಂದಿನ ಒಂದೆರಡು ತಿಂಗಳುಗಳಲ್ಲಿ ೨೦ ಎಂ.ವಿ.ಎ. ೧೧೦ ಕೆ.ವಿ ಟಿಟಿ ಕ.ವಿ. ಯ ಟ್ರಾನ್ಸ್‌ಫಾರಮರ್‌ನ್ನು ಶಿವಮೊಗ್ಗದಲ್ಲಿ ಹಾಕಲಾಗುವುದು. ಇದು ದಾವಣಗೆರೆಯ ಹೊರೆಯನ್ನು ತೆಗೆದುಕೊಳ್ಳುವುದು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಭಿವೃದ್ಧಿ ಚಟುವಟಿಕೆಗಳ ಬಗ್ಗೆ

೯೭. ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ) ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ಬೆಂ.ಅ.ಪ್ರಾ.ವು ಇತ್ತೀಚೆಗೆ ಬಡಾವಣೆಯಂನ್ನು ನಿರ್ಮಿಸುವ, ನಿವೇಶನಗಳನ್ನು ಹಂಚುವಂತಹ ಅಭಿವೃದ್ಧಿ ಚಟುವಟಿಕೆಗಳನ್ನೇನಾದರೂ ತೆಗೆದುಕೊಂಡಿದೆಯೇ ?

(ಆ) ಹಾಗಿದ್ದಲ್ಲಿ, ೧೯೮೧, ೧೯೮೨ ಮತ್ತು ೧೯೮೩ನೇ ವರ್ಷಗಳಲ್ಲಿ ಸಮಾಜದ ದುರ್ಬಲ ವರ್ಗದವರಿಗಾಗಿ ಹಂಚಿದ ನಿವೇಶನಗಳ ಸಂಖ್ಯೆ ಎಷ್ಟು ?

(ಇ) ೧೯೮೩ನೆಯ ಇಸವಿಯಲ್ಲಿ ಬಡಾವಣೆಗಳನ್ನು ನಿರ್ಮಿಸುವ ಮತ್ತು ನಿವೇಶನಗಳನ್ನು ಹಂಚುವುದಕಾಗಿ ಯಾವುದೇ ಕಾರ್ಯಕ್ರಮವನ್ನೂ ಸಿದ್ಧಪಡಿಸಲಾಗುತ್ತಿದೆಯೇ ಅಥವಾ ರೂಪುಗೊಳಿಸಲಾಗುತ್ತಿದೆಯೇ ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮಂತ್ರಿಗಳು).—

(ಅ) ಹೌದು.

(ಆ) ೧೯೮೧ – ೮೬
೧೯೮೨ – ೧೬೦೩
೧೯೮೩ – ಇಲ್ಲ

(ಇ) ಹೌದು

ಶ್ರೀ ಎಂ. ಎಸ್. ಕೃಷ್ಣನ್. (ಅ) ಪ್ರಶ್ನೆಗೆ ಉತ್ತರ ಕೊಡುತ್ತಾ ೧೯೮೩ರಲ್ಲಿ ಏನು ಇಲ್ಲವೆಂದೂ ಹೇಳಿದ್ದೀರಿ, ಇದಕ್ಕೆ ಕಾರಣಗಳು ಏನು ? ೧೯೮೨ರಲ್ಲಿ ೧೬೦೩ ಸೈಟುಗಳನ್ನು ಹಂಚಿದ್ದೀರಿ. ಆರ್ಥಿಕವಾಗಿ ಹಿಂದುಳಿದಿರುವವರಿಗೆ ಸೈಟುಗಳನ್ನು ವಿತರಣೆ ಮಾಡದೆ ಉಳಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ಚಂದ್ರಶೇಖರ್.—ಪ್ರಾಧಿಕಾರ ಈಗತಾನೆ ಆಂದರೆ ಈ ವರ್ಷ ಪ್ರಾರಂಭವಾಗಿದೆ. ನಾವೂ ಕೂಡ ಸದಸ್ಯರಾಗಿದ್ದೀರಿ. ೧೬೦೩ ಸೈಟುಗಳು ಮಾತ್ರ ಆಗಿವೆ. ೫೩೨೭ ಸೈಟುಗಳನ್ನು ಕೊಡಬೇಕೆಂದು ಮಾಡಿದ್ದರೂ ಅದರ ಪೈಕಿ ೧೬೦೩ ಸೈಟುಗಳು ಹಂಚಿಕೆಯಾಗಿವೆ.

ಶ್ರೀ ಎಂ. ಎಸ್. ಕೃಷ್ಣನ್.—೧೬೦೩ ವಿತಕ್ಕೆ ಮಾಡಿದಿರಿ ? ಮಿಕ್ಕವನ್ನು ಏತಕ್ಕೆ ಹಂಚಿಕೆ ಮಾಡಲಿಲ್ಲ ? ಆರ್ಥಿಕವಾಗಿ ಹಿಂದುಳಿದವರಿಗೆ ಅನುಕೂಲವಾಗುವುದನ್ನು ಏತಕ್ಕೆ ಮಾಡಲಿಲ್ಲ? ತಕ್ಷಣ ವಿತರಣೆ ಮಾಡಲಿಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಂ ಚಂದ್ರಶೇಖರ್.—ಪ್ರಾಧಿಕಾರ ಇದರ ಬಗ್ಗೆ ಕ್ರಮ ತೆಗೆದುಕೊಳ್ಳುವಂತೆ ಏರ್ಪಾಡು ಮಾಡುತ್ತೇನೆ.

ಶ್ರೀ ಪಿ. ರಾಂದೇವ್.—ಕಳೆದ ಚುನಾವಣೆಯಲ್ಲಿ ಘೋಷಣೆಯಾದ ನಂತರ ಒಂದು ತಿಂಗಳಲ್ಲಿ ಸುಮಾರು ೧೪೦೦ ನಿವೇಶನಗಳನ್ನು, ೨೨೫ ಬಿಡಿ ನಿವೇಶನಗಳನ್ನು ಹಾಗೂ ೭೫೦ ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಂಡು ಡೀನೋಟಿಫೈ ಮಾಡಿರುವುದರ ಬಗ್ಗೆ ಒಟ್ಟು ೭–೮ ಕೋಟಿ ರೂಪಾಯಿಗಳ ಅವ್ಯವಹಾರ ನಡೆದಿರುವುದರ ಬಗ್ಗೆ ಒಂದು ಶ್ವೇತಪತ್ರವನ್ನು ಹೊರಡಿಸುತ್ತೇವೆಂದು ಹೇಳಿದ್ದೀರಿ ? ಅದು ಯಾವಾಗ ಬರುತ್ತೆ ? ಇದರ ಬಗ್ಗೆ ತನಿಖೆ ಕ್ರಮ ತೆಗೆದುಕೊಂಡಿದ್ದೀರಾ ? ಅದು ಯಾವ ಹಂತದಲ್ಲಿದೆ ?